ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ- ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ 5794/2010, 6478/2010 6324/2011, 6329/2011 ಮತ್ತು 1190/2013ಗಳಲ್ಲಿ ದಿನಾಂಕ 26.04.2016ರಂದು ನೀಡಿರುವ ಅಂತಿಮ ತೀರ್ಪಿನ ಅನ್ವಯ ಹಾವೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಲ್ಲಿ ಪ್ರವಾಸ ಭತ್ಯೆ ಮತ್ತು ಸಾದಿಲ್ವಾರು ಬಿಲ್ಲುಗಳಲ್ಲಿ ಅವ್ಯವಹಾರವೆಸಗಿದ ಅಧಿಕಾರಿ / ನೌಕರರಗಳಿಗೆ ದಂಡನೆ ವಿಧಿಸುವ ಬಗ್ಗೆ - ಆದೇಶ.

ಓದಲಾಗಿದೆ.

1. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 229 ಜಿಪಅ 2004 ದಿನಾಂಕ 16.07.2010.
2. ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ 5794/2010, 6478/2010 6329/2011, 6324/2011 ಮತ್ತು 1190/2013ಗಳಲ್ಲಿ ನೀಡಿರುವ ಅಂತಿಮ ಆದೇಶದ ದಿನಾಂಕ 26.04.2016.
3. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 179 ಜಿಪಅ 2016 ದಿನಾಂಕ 26.08.2016.
4. ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ ಗ್ರಾಅಪ 179 ಜಿಪಅ 2016 ದಿನಾಂಕ 26.08.2016.
5. ಆಪಾದಿತರುಗಳು ಕಾರಣ ಕೇಳುವ ನೋಟೀಸಿಗೆ ಸಲ್ಲಿಸಿರುವ ಲಿಖಿತ ಹೇಳಿಕೆ:-

| | | |
|---|---|---|
| 1. | ಶ್ರೀ ಹೊಳಿಯಾಚಿ ಪರಸಪ್ಪ ಬಸಪ್ಪ | 03.09.2016, 18.02.2017 |
| 2. | ದಿವಂಗತ ಓ.ಲಕ್ಷ್ಮಣ ಇವರ ಪತ್ನಿ ಶ್ರೀಮತಿ ಸಾವಿತ್ರಿ | 20.10.2016 |
| 3. | ಶ್ರೀ ಆರ್.ಎನ್.ದೇಶಪಾಂಡೆ, | 20.10.2016, |
| 4. | ಶ್ರೀ ಜೆ. ರುಕ್ಮಾಂಗದನ್ | 14.09.2016 |
| 5. | ಶ್ರೀ ಈಶ್ವರ ವೈ. ಮನ್ನಾಚಾರ್ಯ | 10.09.2016. |

6. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 179 ಜಿಪಅ 2016 ದಿನಾಂಕ: 30.03.2017.
7. ಉಪ ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು ಇವರ ಪತ್ರ ಸಂಖ್ಯೆ: PSC 56 CNS 17 ದಿನಾಂಕ: 29.09.2018

ಪ್ರಸ್ತಾವನೆ:

ಹಾವೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಲ್ಲಿ 2000 - 2004ನೇ ಸಾಲಿನಲ್ಲಿ ಪ್ರವಾಸ ಭತ್ಯೆ ಮತ್ತು ಸಾದಿಲ್ವಾರು ಬಿಲ್ಲುಗಳಲ್ಲಿ ಅವ್ಯವಹಾರ ಎಸಗಿದ ಈ ಕೆಳಕಂಡ ಅಧಿಕಾರಿ / ನೌಕರರುಗಳ ವಿರುದ್ಧ ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ಅನುಸಾರ ಇಲಾಖಾ ವಿಚಾರಣೆಯನ್ನು ಕೈಗೊಂಡು, ಇಲಾಖಾ ವಿಚಾರಣೆಯಲ್ಲಿ ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 16.07.2010ರ ಸರ್ಕಾರದ ಆದೇಶದಲ್ಲಿ ಸದರಿಯವರುಗಳಿಂದ

ಸರ್ಕಾರಕ್ಕೆ ಉಂಟಾದ ಆರ್ಥಿಕ ನಷ್ಟದ ಮೊತ್ತವನ್ನು ವಸೂಲು ಮಾಡಲು ಹಾಗೂ ದಂಡನೆಯನ್ನು ವಿಧಿಸಲಾಗಿತ್ತು:-

1. ಓ.ಲಕ್ಷ್ಮಣ, ಹಿಂದಿನ ವ್ಯವಸ್ಥಾಪಕರು (ಪ್ರಸ್ತುತ ನಿಧನ), ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾವೇರಿ.
2. ಶ್ರೀ ಟಿ. ವೆಂಕಟೇಶ್ವರ, ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾವೇರಿ (ಪ್ರಸ್ತುತ ನಿವೃತ್ತ).
3. ಶ್ರೀ ಹೊಳಿಯಾಚಿ ಪರಸಪ್ಪ ಬಸಪ್ಪ, ಹಿಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾವೇರಿ.
4. ಶ್ರೀ ಜೆ. ರುಕ್ಮಾಂಗದನ್, ಅಂದಿನ ಪತ್ರಾಂಕಿತ ಉಪ ಖಜಾನಾಧಿಕಾರಿಗಳು, ಸವಣೂರು (ಪ್ರಸ್ತುತ ನಿವೃತ್ತ).
5. ಶ್ರೀ ಆರ್.ಎನ್.ದೇಶಪಾಂಡೆ, ಅಂದಿನ ಮುಖ್ಯ ಲೆಕ್ಕಿಗರು, ಜಿಲ್ಲಾ ಖಜಾನೆ, ಹಾವೇರಿ (ಪ್ರಸ್ತುತ ನಿವೃತ್ತ)
6. ಶ್ರೀ ಎ.ವೈ.ಮನ್ವಾಚಾರ್ಯ, ಮುಖ್ಯ ಲೆಕ್ಕಿಗರು, ಜಿಲ್ಲಾ ಖಜಾನೆ, ಹಾವೇರಿ.
7. ದಿವಂಗತ ಎಂ.ಎಂ.ಮುಲ್ಲಾ, ದ್ವಿತೀಯ ದರ್ಜೆ ಸಹಾಯಕ, ಜಿಲ್ಲಾ ಖಜಾನೆ, ಹಾವೇರಿ.

ಸದರಿ ಆದೇಶದ ವಿರುದ್ಧ 1) ಶ್ರೀ ಐ.ವೈ.ಮನ್ವಾಚಾರ್ಯ, 2)ಶ್ರೀ ಜೆ.ರುಕ್ಮಾಂಗದ, 3)ಶ್ರೀ ಹೊಳಿಯಾಚಿ ಪರಸಪ್ಪ ಬಸಪ್ಪ, 4)ಶ್ರೀಮತಿ ಸಾಕಮ್ಮ ದಿವಂಗತ ಓ.ಲಕ್ಷ್ಮಣರವರ ಪತ್ನಿ ಮತ್ತು 5) ಶ್ರೀ ಆರ್.ಎನ್.ದೇಶಪಾಂಡೆ ಇವರುಗಳು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಕ್ರಮವಾಗಿ ಅರ್ಜಿ ಸಂಖ್ಯೆ 1190/2013. 6329/2011, 5794/2010, 6478/2010 ಮತ್ತು 6324/2011 ಗಳನ್ನು ಸಲ್ಲಿಸಿದ್ದು, ಸದರಿ ಎಲ್ಲಾ ಅರ್ಜಿಗಳಿಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ 26.04.2016ರಂದು ನೀಡಿರುವ ಅಂತಿಮ ಆದೇಶದಲ್ಲಿ ಅರ್ಜಿಗಳನ್ನು ಪುರಸ್ಕರಿಸಿ ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 229 ಜಿಪಅ 2004 ದಿನಾಂಕ 16.07.2010ನ್ನು ಅರ್ಜಿದಾರರಿಗೆ ಸೀಮಿತವಾಗಿ ರದ್ದುಪಡಿಸಿ, ಅರ್ಜಿದಾರರಿಗೆ (ಆಪಾದಿತ ಅಧಿಕಾರಿ / ನೌಕರರು) ಸಿ.ಓ.ಡಿ. ತನಿಖಾ ವರದಿಯ ಪ್ರತಿಯನ್ನು ನೀಡಿ, ಅವರುಗಳು ಸಲ್ಲಿಸುವ ಉತ್ತರಗಳನ್ನು ಪರಿಗಣಿಸಿ ಮುಂದಿನ ಕ್ರಮ ಕೈಗೊಳ್ಳಲು ಪ್ರತಿವಾದಿಯಾದ ಸರ್ಕಾರಕ್ಕೆ ಸ್ವತಂತ್ರವನ್ನು ನೀಡಿರುತ್ತದೆ. ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಸಂಬಂಧಿತ ಆದೇಶದ ಉಧೃತ ಭಾಗವು ಈ ಕೆಳಕಂಡಂತಿರುತ್ತದೆ:-

"After careful consideration of the above order, it is confirmed that there is no reference to serve a copy of the COD report and consideration of the reply to the second show cause notice. Accordingly, we are of the considered view, the impugned order is not a reasoned and considered order and without application of mind, such an order is not

sustainable in the eye of law. Accordingly, the impugned order is liable to be quashed, and further we inclined to remit the matter to the first respondent for fresh consideration. The first respondent has to decide whether the finding of the enquiry officer against dead person is sustainable in the eye of law.

13. For the foregoing reasons, we are of the considered view the impugned order not sustainable in the eye of law. Applicants have established their case to quash the impugned order. The respondents have not justified to support the impugned orders. We quash the impugned order and remit the matter to the respondent for fresh consideration. The first respondent is directed to serve a copy of the COD report referred to in the impugned order on the respondents, giving them opportunity to file objections if any and then pass a reasoned and considered order."

ಸದರಿ ಪ್ರಕರಣದಲ್ಲಿ ಮಾನ್ಯ ಆಡಳಿತ ನ್ಯಾಯ ಮಂಡಳಿಯು ನೀಡಿರುವ ಆದೇಶದ ಅನುಸಾರ ಅರ್ಜಿದಾರರುಗಳಿಗೆ ಸೀಮಿತವಾಗಿ ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿನಾಂಕ 26.08.2016ರ ಸರ್ಕಾರದ ಆದೇಶದಲ್ಲಿ ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 229 ಜಿಪಅ 2004 ದಿನಾಂಕ 16.07.2010ನ್ನು ರದ್ದುಪಡಿಸಲಾಗಿದೆ ಹಾಗೂ ಸದರಿ ಆಪಾದಿತರುಗಳಿಗೆ ಸಿ.ಓ.ಡಿ. ತನಿಖೆಯ ವರದಿಯ ಪ್ರತಿಯನ್ನು ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿನಾಂಕ 26.08.2016ರ ಕಾರಣ ಕೇಳುವ ನೋಟೀಸಿನೊಂದಿಗೆ ಜಾರಿ ಮಾಡಿ ವಿವರಣೆಯನ್ನು ಸಲ್ಲಿಸುವಂತೆ ತಿಳಿಸಲಾಗಿತ್ತು.

ಸರ್ಕಾರದ ಕಾರಣ ಕೇಳುವ ನೋಟಿಸ್‌ಗೆ ಪ್ರತಿಯಾಗಿ ಶ್ರೀ ಹೊಳಿಯಾಚಿ ಪರಸಪ್ಪ ಬಸಪ್ಪ, ಕಾರ್ಯಪಾಲಕ ಇಂಜಿನಿಯರ್ ರವರು ಸಲ್ಲಿಸಿದ್ದ ಲಿಖಿತ ವಿವರಣೆಯನ್ನು ಪರಿಗಣಿಸಿ ಮೇಲೆ ಓದಲಾದ ಕ್ರಮ ಸಂಖ್ಯೆ: (6)ರ ದಿನಾಂಕ: 30.03.2017ರ ಆದೇಶದಲ್ಲಿ ಸದರಿಯವರನ್ನು ಆರೋಪದಿಂದ ಕೈಬಿಟ್ಟು ದೋಷಮುಕ್ತಗೊಳಿಸಿ ಆದೇಶ ಹೊರಡಿಲಾಗಿರುತ್ತದೆ.

ಇನ್ನುಳಿದ ಆಪಾದಿತರು ಸರ್ಕಾರದ ಕಾರಣ ಕೇಳುವ ನೋಟೀಸ್‌ಗೆ ಪ್ರತಿಯಾಗಿ ಸಲ್ಲಿಸಿರುವ ಲಿಖಿತ ವಿವರಣೆಗಳು ಈ ಕೆಳಕಂಡಂತಿದೆ:-

1. <u>ದಿವಂಗತ ಓ.ಲಕ್ಷ್ಮಣ ರವರ ಪತ್ನಿ ಶ್ರೀಮತಿ ಸಾವಿತ್ರಿ :-</u> ತಮ್ಮ ಪತಿ ದಿ. ಓ ಲಕ್ಷ್ಮಣ ಇವರು ಹಾವೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಲ್ಲಿ ಟಿಎ/ಡಿಸಿ ಬಿಲ್ಲುಗಳಲ್ಲಿ ಅವ್ಯವಹಾರವೆಸಗಿರುತ್ತಾರೆಂದು ಆರೋಪಿಸಿ ದಿನಾಂಕ 20.02.2006ರಂದು ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಿರುತ್ತಾರೆಂದು ಈ ಆರೋಪವನ್ನು ತಮ್ಮ ಪತಿಯು ಅಲ್ಲಗಳೆದಿದ್ದು ಇದಕ್ಕೆ ಸಂಬಂಧಿಸಿದಂತೆ ಶ್ರೀ ಎನ್.ಎಸ್.ಸಂಗೊಳ್ಳಿ, ವಿಚಾರಣಾಧಿಕಾರಿಯವರು ವಿಚಾರಣೆ ನಡೆಸಿದ್ದು, ಸದರಿ ವಿಚಾರಣೆ ನಡೆಯುವ ಸಂದರ್ಭದಲ್ಲಿಯೇ ತಮ್ಮ ಪತಿಯವರು ದಿನಾಂಕ:28.07.2007ರಂದು

ನಿಧನ ಹೊಂದಿರುತ್ತಾರೆಂದು ಇದನ್ನರಿಯದ ವಿಚಾರಣಾಧಿಕಾರಿಯವರು ತಮ್ಮ ಪತಿಯ ಮೇಲಿನ ಆರೋಪಗಳು ಸಾಬೀತಾಗಿವೆಯೆಂದು ವರದಿಯನ್ನು ನೀಡಿರುತ್ತಾರೆಂದೂ, ಕರ್ನಾಟಕ ನಾಗರೀಕ ಸೇವಾ ನಿಯಮಗಳ ಪ್ರಕಾರ ವಿಚಾರಣೆ ನಡೆದ ಸಂದರ್ಭದಲ್ಲಿ ಆಪಾದಿತ ವ್ಯಕ್ತಿಯು ನಿಧನ ಹೊಂದಿದ್ದಲ್ಲಿ ಅವರ ವಿರುದ್ಧದ ಪ್ರಕರಣವನ್ನು ಕೈ ಬಿಡಬೇಕಾಗಿರುತ್ತದೆಂದು ತಿಳಿಸಲಾಗಿದೆ. ಆದರೆ, ಈ ಪ್ರಕರಣದಲ್ಲಿ ಅದನ್ನು ಪಾಲಿಸದೆಯೇ ತಮಗೆ ಎರಡನೇ ಕಾರಣ ಕೇಳುವ ನೋಟಿಸ್‌ನ್ನು ಜಾರಿ ಮಾಡಿರುವುದು ನಿಯಮ ಬಾಹಿರವಾಗಿದೆಯೆಂದೂ, ಅಲ್ಲದೇ ದಿ// ಓ ಲಕ್ಷ್ಮಣ ರವರ ವಿರುದ್ಧದ ಆರೋಪಗಳು ಸಾಬೀತಾಗಿವೆಯಂದು ನಿರ್ಧರಿಸಿ ರೂ. 50,09,371/-ಗಳನ್ನು ದಂಡನೆ ವಿಧಿಸಿರುವುದು ನ್ಯಾಯ ಸಮ್ಮತವಾಗಿಲ್ಲವೆಂದು ಮತ್ತು ಸಿಓಡಿಯು ತನಿಖೆ ನಡೆಸಿ 2009ರಲ್ಲಿ ನೀಡಿರುವ ವರದಿಯಲ್ಲಿ ಸದರಿ ವಿಭಾಗದಲ್ಲಿ ನಡೆದ ಅವ್ಯವಹಾರಕ್ಕೆ ದಿ// ಓ ಲಕ್ಷ್ಮಣರವರೇ ಕಾರಣರಾಗಿದ್ದಾರೆಂದು ತಿಳಿಸಿರುವುದನ್ನು ಒಪ್ಪಲು ಸಾಧ್ಯವಿಲ್ಲವೆಂದು ಹಾಗೂ ತಮ್ಮ ಪತಿಯು ದಿನಾಂಕ 28.07.2007ರಲ್ಲಿಯೇ ನಿಧನ ಹೊಂದಿರುವುದರಿಂದ ನಿಧನ ಹೊಂದಿರುವ ಆಪಾದಿತರ ವಿರುದ್ಧದ ಪ್ರಕರಣವನ್ನು ರದ್ದುಗೊಳಿಸಿ ತಮ್ಮ ಪತಿಗೆ ಬರಬೇಕಾಗಿದ್ದ ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ.

<u>2. ಶ್ರೀ ಆರ್.ಎನ್.ದೇಶಪಾಂಡೆ, ಅಂದಿನ ಮುಖ್ಯ ಲೆಕ್ಕಿಗರು :-</u> ಸಿಓಡಿಯು ಕೈಗೊಂಡಿರುವ ತನಿಖೆಯಲ್ಲಿ ಓ ಲಕ್ಷ್ಮಣ ಅವರನ್ನು ಮಾತ್ರ ಆರೋಪಿಯನ್ನಾಗಿ ಮಾಡಿದ್ದು, ಸದರಿಯವರು ಮೃತಪಟ್ಟಿರುವುದರಿಂದ ಹಾಗೂ ಸದರಿ ಪ್ರಕರಣದಲ್ಲಿ ಬೇರೆ ಯಾರೂ ಆರೋಪಿತರು ಇಲ್ಲವೆಂದು ತಿಳಿಸಲಾಗಿರುವುದರಿಂದ ತಾವು ನಿರಪರಾಧಿಯಾಗಿದ್ದು, ತಾವು ಅಪರಾಧ ಮಾಡಿದ ಬಗ್ಗೆ ಸಿಓಡಿ ವರದಿಯಲ್ಲಿ ಉಲ್ಲೇಖಿಸಿಲ್ಲವಾದ ಕಾರಣ ದಿನಾಂಕ 16.07.2010ರಂದು ಮಾಡಿದ ಆದೇಶದ ಪ್ರಕಾರ ತಮ್ಮಿಂದ ವಸೂಲಿ ಮಾಡಿರುವ ರೂ. 2,81,406/- ಹಾಗೂ ನಿವೃತ್ತಿ ವೇತನದಲ್ಲಿ 2 ವರ್ಷ ಅವಧಿಗೆ ಕಡತಗೊಳಿಸಿದ ಶೇಕಡಾ 10/-ರಷ್ಟು ಹಣ ಮತ್ತು ಡಿ.ಎ. ಹಣವನ್ನು ಬಡ್ಡಿ ಸಹಿತ ಹಿಂದಿರುಗಿಸುವಂತೆ ಕೋರಿರುತ್ತಾರೆ.

<u>3. ಶ್ರೀ ಈಶ್ವರ ವೈ. ಮನ್ವಾಚಾರ್ಯ, ಅಂದಿನ ಮುಖ್ಯ ಲೆಕ್ಕಿಗರು :-</u> ಜಿಲ್ಲಾ ಖಜಾನೆಯು ಆರ್ಥಿಕ ಇಲಾಖೆಯ ಅಧೀನ ಕಾರ್ಯಾಲಯವಾಗಿದ್ದು, ಸ್ವತಂತ್ರ ಕಾರ್ಯಾಲಯವಾಗಿ ಕಾರ್ಯನಿರ್ವಹಿಸುತ್ತಿದೆ. ಹಿಂದಿನ ತನಿಖಾ ವರದಿಯಲ್ಲಿ ಜಿಲ್ಲಾ ಪಂಚಾಯತಿ ಹಾವೇರಿ ವ್ಯಾಪ್ತಿಯ ಜಿಲ್ಲಾ ಪಂಚಾಯತ ಇಂಜಿನಿಯರಿಂಗ್ ವಿಭಾಗದಲ್ಲಿ 2004-05ಕ್ಕೆ ಮಾತ್ರ ಸಂಬಂಧಪಟ್ಟ ನಾಲ್ಕು ಜನ ಖಜಾನೆ ಸಿಬ್ಬಂದಿಗಳನ್ನು ಆಂತರಿಕ ಲೆಕ್ಕಪರಿಶೋಧನಾ ಸಿಬ್ಬಂದಿಗಳಂತೆ ಪರಿಗಣಿಸಿ ತಪ್ಪು ಅಭಿಪ್ರಾಯದಿಂದ ತಮ್ಮ ಮೇಲಿನ ಆರೋಪಗಳು ಸಾಬೀತಾಗಿವೆಯಂದೂ ವರದಿಯನ್ನು ನೀಡಲಾಗಿದೆಯಂದೂ, 2001-05ರ ವರೆಗಿನ ರೂ. 1,00,18,742/-ಮೊತ್ತದ ನೂರಾರು ಹೆಚ್ಚು ಬಿಲ್ಲುಗಳು ತೀರ್ಣಗೊಂಡಿದ್ದು, 2001-04ರ ವರೆಗಿನ ತೀರ್ಣಗೊಳಿಸಿದ ಖಜಾನೆ ಅಧಿಕಾರಿ/ಸಿಬ್ಬಂದಿಗಳಿಗೆ ವಿನಾಯಿತಿ ನೀಡಿ ಕೇವಲ 2004-05ನೇ ಸಾಲಿಗೆ ಕೆಲಸ ನಿರ್ವಹಿಸಿದ ನಾಲ್ಕು ಜನ ಖಜಾನೆ ಸಿಬ್ಬಂದಿಗಳನ್ನೇ ಮಾತ್ರ ಎಲ್ಲ ಬಿಲ್ಲುಗಳಿಗೆ ಹೊಣೆಗಾರರನ್ನಾಗಿ ಮಾಡಲ್ಪಟ್ಟಿದ್ದು ವಿಷಾದನೀಯವೆಂದೂ, ತಮಗೆ 2004-05ರ ರೂ. 25,71,760/-ಮೊತ್ತದ 50 ಬಿಲ್ಲುಗಳ ಪೈಕಿ 31 ಬಿಲ್ಲುಗಳಿಗೆ ಮಾತ್ರ ತಮ್ಮಿಂದ ಚಿಕ್ಕ ರುಜುವಾಗಿದ್ದು ಆ ಮೊತ್ತವನ್ನು ಈಗಾಗಲೇ ಕಾರ್ಯಪಾಲಕ ಇಂಜಿನಿಯರ್ ರವರು ಸರ್ಕಾರಕ್ಕೆ ಭರಣ ಮಾಡಿರುತ್ತಾರೆಂದು, ರೂ. 1,00,18,742/-ಮೊತ್ತದಲ್ಲಿ ತಮಗೆ ರೂ. 25,71,260/-ಮಾತ್ರ ಸೀಮಿತವಾಗಿದ್ದು ಉಳಿದ ರೂ 74,46,982/-ಮೊತ್ತದ ಬಿಲ್ಲುಗಳಿಗೂ ಖಜಾನೆ ನಿರ್ದೇಶನಾಲಯದ ಶಿಫಾರಸ್ಸಿಲ್ಲದೇ ತಮ್ಮನ್ನು ಹೊಣೆಗಾರರನ್ನಾಗಿ ಮಾಡಿ

ಒಟ್ಟಾರೆ ರೂ. 1,00,18,742/-ಮೊತ್ತದ ಶೇಕಡಾ 2.5%ರಂತೆ ರೂ. 2,81,406/-ಗಳನ್ನು ವಸೂಲಿ ಮಾಡಲಾಗಿದೆಯಂದೂ, ತಮ್ಮಿಂದ ಯಾವುದೇ ತೆರನಾದ ತಪ್ಪು ನಡೆದಿಲ್ಲವಾದ ಕಾರಣ ವಸೂಲಿ ಮಾಡಿರುವ ಹಣವನ್ನು ಮರು ಪಾವತಿಸುವಂತೆ ಹಾಗೂ ಸ್ಥಗಿತಗೊಳಿಸಲ್ಪಟ್ಟ ಎರಡು ವೇತನ ಬಡ್ತಿಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ.

4. ಶ್ರೀ ಜೆ.ರುಕ್ಮಾಂಗದನ್, ಅಂದಿನ ಪತ್ರಾಂಕಿತ ಉಪ ಖಜಾನಾಧಿಕಾರಿ : ತಮ್ಮ ಅವಧಿಯಲ್ಲಿ 50 ಪ್ರವಾಸ ಭತ್ಯೆ ಬಿಲ್ಲುಗಳನ್ನು ಪಾಸ್ ಮಾಡಲಾಗಿದ್ದು ಇದರ ಮೊತ್ತ ರೂ. 26,71,760/-ಗಳನ್ನು ಸಂಬಂಧಪಟ್ಟ ಇಲಾಖೆಯವರು ಈಗಾಗಲೇ ಸರ್ಕಾರಕ್ಕೆ ಮರುಪಾವತಿ ಮಾಡಿರುವುದರಿಂದ ಸರ್ಕಾರಕ್ಕೆ ಏನೂ ನಷ್ಟವಾಗಿಲ್ಲವೆಂದೂ, ಡಿ.ಸಿ. ಬಿಲ್ಲುಗಳನ್ನು ತಮ್ಮ ಅವಧಿಯಲ್ಲಿ ಪಾಸ್ ಮಾಡಲಾಗಿರುವುದಿಲ್ಲವೆಂದು ಹಾಗೂ ತಮ್ಮ ಅವಧಿಗೆ ಮುನ್ನ ಸೇವೆ ಸಲ್ಲಿಸಿರುವ ಖಜಾನೆ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳನ್ನು ವಿಚಾರಣೆಗೊಳಪಡಿಸದೇ ಇರುವುದು ತಮಗೆ ಬಹಳ ಅನ್ಯಾಯವಾಗಿದೆಯಂದು ಒಂದು ವೇಳೆ ಮರು ವಿಚಾರಣೆ ಮಾಡುವುದಾದರೆ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿರುತ್ತಾರೆ.

ಸರ್ಕಾರವು ಸಿ.ಓ.ಡಿ. ರವರ ತನಿಖಾ ವರದಿ, ಇಲಾಖಾ ವಿಚಾರಣಾ ವರದಿ, ಹಾಗೂ ಆಪಾದಿತರು ಸಲ್ಲಿಸಿರುವ ಲಿಖಿತ ಹೇಳಿಕೆಗಳನ್ನು ಹಾಗೂ ಇನ್ನಿತರ ದಾಖಲೆಗಳನ್ನು ಪರಿಶೀಲಿಸಿರುತ್ತದೆ. 2000-04ರ ಅವಧಿಯಲ್ಲಿ ಹಾವೇರಿ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕೆಲವು ಸಿಬ್ಬಂದಿಗಳು ಪ್ರವಾಸ ಭತ್ಯೆ ಬಿಲ್ಲುಗಳನ್ನು ಬೃಹತ್ ಪ್ರಮಾಣದಲ್ಲಿ ಪಡೆದುಕೊಂಡು ಆ ಸಂದರ್ಭದಲ್ಲಿ ಕಾರ್ಯಪಾಲಕ ಇಂಜಿನಿಯರ್ ರವರ ಸಹಿಯನ್ನು ಫೋರ್ಜರಿ ಮಾಡಿ ಒಟ್ಟಾರೆ ರೂ. 1.00 ಕೋಟಿಗೂ ಹೆಚ್ಚಿನ ಮೊತ್ತವನ್ನು ರಾಜ್ಯ ಖಜಾನೆಯಿಂದ ಪಡೆದುಕೊಂಡಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಸರ್ಕಾರದ ಹಂತದಲ್ಲಿ ಇಲಾಖಾ ವಿಚಾರಣೆ ಮತ್ತು C.O.D ತನಿಖೆ ನಡೆಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.

C.O.D ವಿಭಾಗವು ತನಿಖೆ ನಡೆಸಿ ಸರ್ಕಾರಕ್ಕೆ ದಿನಾಂಕ:1.04.2009ರಂದು ಸಲ್ಲಿಸಿದ ವರದಿಯಲ್ಲಿ ಓ.ಲಕ್ಷ್ಮಣ, ಹಿಂದಿನ ವ್ಯವಸ್ಥಾಪಕರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾವೇರಿ ಇವರು ಸಿಬ್ಬಂದಿ ವರ್ಗಗಳ ಹಾಗೂ ಅಧಿಕಾರಿಗಳ ಪ್ರವಾಸ ಭತ್ಯೆ ಬಿಲ್ಲುಗಳನ್ನು ತಯಾರಿಸಿ ಬಿಲ್ಲುಗಳಿಗೆ ನಕಲಿ ಸಹಿ ಮಾಡಿ ಬಿಲ್ಲುಗಳನ್ನು ಖಜಾನೆಗೆ ನೀಡಿ ಮಂಜೂರಾತಿ ಪಡೆದುಕೊಂಡು ಹಣವನ್ನು ಸ್ವಂತಕ್ಕೆ ಬಳಸಿಕೊಂಡಿರುವುದು ಧೃಡಪಟ್ಟಿರುತ್ತದೆ. -ಸದರಿ ಆರೋಪಿತ ನೌಕರ ಓ. ಲಕ್ಷ್ಮಣ ಇವರು ದಿನಾಂಕ:27.07.2007ರಂದು ಮೃತಪಟ್ಟಿರುವುದರಿಂದ ಹಾಗೂ ಈ ಪ್ರಕರಣದಲ್ಲಿ ಬೇರೆ ಯಾವ ಆರೋಪಗಳು ಇಲ್ಲದೇ ಇರುವುದರಿಂದ ಮಾನ್ಯ ಸಿ.ಜೆ.ಎಮ್.ನ್ಯಾಯಾಲಯಕ್ಕೆ ದಿನಾಂಕ:17.02.2009ರಂದು ABATEMENT ವರದಿಯನ್ನು ಸಲ್ಲಿಸಲಾಗಿದೆಯೆಂದು ತಿಳಿಸಿರುತ್ತದೆ.

ಪ್ರಕರಣದ ವಾಸ್ತವ ಅಂಶವನ್ನು ಪರಿಶೀಲಿಸಲಾಗಿ ಅಧಿಕಾರಿ/ನೌಕರರುಗಳ ಪ್ರವಾಸ ಭತ್ಯೆಯ ಬಿಲ್ಲುಗಳನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕಛೇರಿಯಲ್ಲಿ ತಯಾರಿಸಿ ನಂತರ ಅವುಗಳನ್ನು ಜಿಲ್ಲಾ ಪಂಚಾಯತಿ ಲೆಕ್ಕ ಪತ್ರ ಶಾಖೆಯ ಮುಖಾಂತರ ಸರ್ಕಾರಿ ಖಜಾನೆಗೆ ಸಲ್ಲಿಸಿ ಹಣ ಸೆಳೆಯುವುದು ಹಾಗೂ ಖಜಾನೆಯಿಂದ ಪಡೆದ ನಗದನ್ನು ಸಂಬಂಧಪಟ್ಟ ಅಧಿಕಾರಿ/ನೌಕರರುಗಳಿಗೆ ನೀಡಿ ಅವರಿಂದ ಸ್ವೀಕೃತಿ ಪಡೆಯುವ ಪದ್ಧತಿ ಚಾಲ್ತಿಯಲ್ಲಿತ್ತು.

ಪ್ರಸ್ತುತ ಪ್ರಕರಣದಲ್ಲಿ ದಿವಂಗತ ಓ.ಲಕ್ಷ್ಮಣ, ಹಿಂದಿನ ವ್ಯವಸ್ಥಾಪಕ ರವರು ಹಾವೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕಛೇರಿಯ ಕಾರ್ಯಪಾಲಕ ಇಂಜಿನಿಯರ್ ರವರ ಸಹಿಯನ್ನು ಫೋರ್ಜರಿ ಮಾಡುವ ಮೂಲಕ ಬಿಲ್ಲುಗಳನ್ನು ಜಿಲ್ಲಾ ಪಂಚಾಯತಿ ಲೆಕ್ಕ ಪತ್ರ ವಿಭಾಗಕ್ಕೂ ಸಹ ಸಲ್ಲಿಸದೇ ನೇರವಾಗಿ ಖಜಾನೆಗೆ ಸಲ್ಲಿಸಿ ನಗದು ಪಡೆಯುವ ಮೂಲಕ ಒಟ್ಟಾರೆ ಒಂದು ಕೋಟಿಗೂ ಹೆಚ್ಚಿನ ಮೊತ್ತವನ್ನು ಪಡೆದು ದುರುಪಯೋಗಪಡಿಸಿಕೊಂಡಿರುವುದು ಸಿ.ಓ.ಡಿ. ತನಿಖಾ ವರದಿಯಲ್ಲಿ ಸ್ಪಷ್ಟವಾಗಿರುತ್ತದೆ. ಅಲ್ಲದೆ ಸದರಿ ನೌಕರರು ಈ ರೀತಿ ಪಡೆದುಕೊಂಡ ಮೊತ್ತದ ಪೈಕಿ 25,71,760/- ಗಳನ್ನು ಸರ್ಕಾರಕ್ಕೆ ತುಂಬಿರುತ್ತಾರೆ ಹಾಗೂ ಉಳಿದ ಮೊತ್ತವನ್ನು ಸರ್ಕಾರಕ್ಕೆ ಭರ್ತಿ ಮಾಡುವುದಾಗಿ ಲಿಖಿತವಾಗಿ ಮುಚ್ಚಳಿಕೆ ನೀಡಿದ್ದರು.

ಈ ಕುರಿತಂತೆ ಪರಿಶೀಲಿಸಲಾಗಿದೆ. ಇಲಾಖಾ ವಿಚಾರಣೆ ಸಂದರ್ಭದಲ್ಲಿ ಶಿಸ್ತು ಪ್ರಾಧಿಕಾರವು ಹಾಜರುಪಡಿಸಿದ 8 ಸಾಕ್ಷಿಗಳು ಓ.ಲಕ್ಷ್ಮಣ, ಹಿಂದಿನ ವ್ಯವಸ್ಥಾಪಕರು ಪ್ರವಾಸ ಭತ್ಯೆಯ ಬಿಲ್ಲುಗಳು ಹಾಗೂ ಡಿ.ಸಿ. ಬಿಲ್ಲುಗಳ ಹಣವನ್ನು ಪಡೆದು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದು ಹೇಳಿಕೆ ನೀಡಿರುತ್ತಾರೆ. ಅಲ್ಲದೆ ಇಲಾಖಾ ವಿಚಾರಣೆ ಸಂದರ್ಭದಲ್ಲಿ ಶಿಸ್ತು ಪ್ರಾಧಿಕಾರವು ಹಾಜರುಪಡಿಸಿದ ಪ್ರದರ್ಶಿತ ದಾಖಲೆ ಪಿ-4 ಮತ್ತು ಪಿ-5 ರಲ್ಲಿ ಓ.ಲಕ್ಷ್ಮಣ ಇವರೇ ಸ್ವತ: ಅಪರಾಧವನ್ನು ಒಪ್ಪಿಕೊಂಡಿರುವ ಅಂಶವನ್ನು ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಸ್ಪಷ್ಟಪಡಿಸಿದ್ದಾರೆ. ಅಲ್ಲದೆ ಸದರಿ ಓ.ಲಕ್ಷ್ಮಣ ರವರು ಸರ್ಕಾರಕ್ಕೆ 25,71,760/- ರೂ.ಗಳನ್ನು ಭರಣ ಮಾಡಿರುವುದರಿಂದ ಫೋರ್ಜರಿ ಮಾಡಿ ಹಣ ಪಡೆದು ದುರುಪಯೋಗಪಡಿಸಿಕೊಂಡಿರುವುದು ಸಂಶಯಾತೀತವಾಗಿ ಸ್ಪಷ್ಟವಾಗಿರುತ್ತದೆ. ದಿನಾಂಕ 06.12.2004 ರಂದು ನೋಟರಿಯವರ ಮುಂದೆ ಬರೆದುಕೊಟ್ಟಿರುವ ಮುಚ್ಚಳಿಕೆ ಪತ್ರದಲ್ಲಿ ಸದರಿ ಅಪರಾಧವನ್ನು ತಾವೇ ಮಾಡಿದ್ದು ಅದನ್ನು ಒಪ್ಪಿಕೊಂಡು ಈಗಾಗಲೇ ಪಾವತಿಸಿರುವ ಮೊತ್ತವನ್ನು ಹೊರತುಪಡಿಸಿ ಬಾಕಿ ಮೊತ್ತವನ್ನು ಮರಳಿ ತುಂಬುವುದಾಗಿ ಸಹ ತಿಳಿಸಿರುತ್ತಾರೆ.

ಪ್ರಸ್ತುತ ಪ್ರಕರಣದಲ್ಲಿ ಸರ್ಕಾರವು ಆದೇಶ ಸಂ: ಗ್ರಾಅಪ 229 ಜಿಪಅ 04 ದಿನಾಂಕ 29.10.2005ರಲ್ಲಿ ನಿವೃತ್ತ ಜಿಲ್ಲಾನ್ಯಾಯಧೀಶರಾದ ಶ್ರೀ ಎ.ಕೃಷ್ಣಪ್ಪ ಇವರನ್ನು ವಿಚಾರಣಾಧಿಕಾರಿ ಯನ್ನಾಗಿ ನೇಮಿಸಲಾಗಿದೆ. ಸದರಿ ಆದೇಶದ ಅನುಸಾರ ವಿಚಾರಣಾಧಿಕಾರಿಯವರು ಇಲಾಖಾ ವಿಚಾರಣೆ ನಡೆಸಿ ದಿನಾಂಕ 27.8.2007 ರಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುವರು. ಪ್ರಕರಣದಲ್ಲಿ ಆಪಾದಿತರಾದ ಓ.ಲಕ್ಷ್ಮಣ ಇವರು ದಿನಾಂಕ 28.7.2007ರಂದು ಮರಣ ಹೊಂದಿರುತ್ತಾರೆ. ಅಂದರೆ ಸದರಿ ಆಪಾದಿತರು ಇಲಾಖಾ ವಿಚಾರಣೆ ನಡೆದ ಸಂದರ್ಭದಲ್ಲಿ ದಿನಾಂಕ 05.10.2006ರಂದು ನಡೆದ ಇಲಾಖಾ ವಿಚಾರಣೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿರುವರು. ಹಾಗಾಗಿ ಸದರಿಯವರು ಮೃತರಾದ ವಿಷಯವು ವಿಚಾರಣಾಧಿಕಾರಿಯವರ ಗಮನಕ್ಕೆ ಬಂದಿರುವುದೇ ಇಲ್ಲವೇ ಎಂಬುದು ಸ್ಪಷ್ಟವಾಗಿಲ್ಲ. ಅಲ್ಲದೆ ಇಲಾಖಾ ವಿಚಾರಣೆ ಪ್ರಕ್ರಿಯೆಯಲ್ಲಿ ಸದರಿ ನೌಕರರು ಹಾಜರಾಗಿರುವುದರಿಂದ ಮತ್ತು ಇಲಾಖಾ ವಿಚಾರಣೆಯಲ್ಲಿ ಹಾಜರುಪಡಿಸಿದ ಸಾಕ್ಷಾಧಾರಗಳು ಹಾಗೂ ವಾಸ್ತವಿಕ ಸಂಗತಿಗಳನ್ನು ಆಧರಿಸಿ ವಿಚಾರಣಾಧಿಕಾರಿಯವರು ಸದರಿಯವರ ವಿರುದ್ಧದ ಆರೋಪಗಳ ಬಗ್ಗೆ ನಿರ್ಣಯಿಸಿರುವುದು ಸ್ಪಷ್ಟವಾಗಿರುತ್ತದೆ. ಶಿಸ್ತು ಪ್ರಾಧಿಕಾರವೂ ಸಹ ದಿ: ಓ. ಲಕ್ಷ್ಮಣ ಇವರು ಮೃತರಾಗಿದ್ದರೂ ಸದರಿಯವರು ಬೃಹತ್ ಪ್ರಮಾಣದ ಆರ್ಥಿಕ ನಷ್ಟಕ್ಕೆ ಕಾರಣರಾಗಿರುವುದು ಸ್ಪಷ್ಟವಾಗಿರುವುದರಿಂದ ನಿಯಮಾನುಸಾರ ಸದರಿ ನಷ್ಟದ ಮೊತ್ತವನ್ನು ಅವರ ನಿವೃತ್ತಿ ಸೌಲಭ್ಯಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಮೂಲಕ ಸರಿದೂಗಿಸಿಕೊಳ್ಳಲು ಹಾಗೂ ಬಾಕಿ ಮೊತ್ತವನ್ನು ಅವರ ವಾರಸುದಾರರಿಂದ ವಸೂಲು ಮಾಡುವ

ಬಗ್ಗೆ ನಿರ್ಣಯಿಸಿರುತ್ತದೆ. ಹಾಗಾಗಿ ದಿವಂಗತ ಓ.ಲಕ್ಷ್ಮಣ ಇವರ ವಿರುದ್ಧದ ನಡವಳಿಗಳು ABATE ಆಗಿದ್ದರೂ ಅವರಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟವನ್ನು ವಸೂಲು ಮಾಡುವ ಪ್ರಕ್ರಿಯೆಯು ಮುಂದುವರೆದಿರುತ್ತದೆ.

ಉಳಿದಂತೆ ಖಜಾನೆ ಇಲಾಖೆಯ ಅಧಿಕಾರಿಗಳು ಸಲ್ಲಿಸಿರುವ ವಿವರಣೆಯಲ್ಲಿ ಸಿ.ಓ.ಡಿ. ವಿಭಾಗವು ಸಲ್ಲಿಸಿದ ವರದಿಯಲ್ಲಿ ಓ. ಲಕ್ಷ್ಮಣ ಒಬ್ಬರೇ ಆಪಾದಿತರೆಂದು ತಿಳಿಸಿರುವುದನ್ನು ಹಾಗೂ ತಾವುಗಳು ಕೆಲಸ ನಿರ್ವಹಿಸಿದ ಅವಧಿಗೆ ಸಂಬಂಧಿಸಿದಂತೆ ಫೋರ್ಜರಿ ಬಿಲ್ಲುಗಳನ್ನು ಸಲ್ಲಿಸಿ ಪಡೆದುಕೊಂಡಿದ್ದ ಮೊತ್ತದ ಪೈಕಿ ದಿವಂಗತ ಓ. ಲಕ್ಷ್ಮಣ ಇವರು ಈಗಾಗಲೇ 25.76 ಲಕ್ಷ ರೂ.ಗಳನ್ನು ಜಮಾ ಮಾಡಿರುತ್ತಾರೆಂದು, ಖಜಾನೆ ನಿರ್ದೇಶನಾಲಯದ ಶಿಫಾರಸ್ಸು ಇಲ್ಲದಿದ್ದರೂ ತಮ್ಮನ್ನು ಆರೋಪಿತರೆಂದು ಪರಿಗಣಿಸಿ ತಮ್ಮಿಂದ ಹಣ ವಸೂಲು ಮಾಡಿರುವುದನ್ನು ವಾಪಸ್ ನೀಡಬೇಕೆಂದು, 2001-04ರ ಅವಧಿಯಲ್ಲಿನ ಆರೋಪಿತರನ್ನು ಕೈಬಿಟ್ಟು, ತಮ್ಮ ವಿರುದ್ಧ ಮಾತ್ರ ಇಲಾಖಾ ವಿಚಾರಣೆ ಕೈಗೊಂಡಿದ್ದು, ತಮಗೆ ಅನ್ಯಾಯವಾಗಿದೆ ಎಂದು ತಿಳಿಸಿರುತ್ತಾರೆ. ಒಟ್ಟಾರೆ ತಮ್ಮ ವಿರುದ್ಧದ ಆರೋಪಗಳನ್ನು ಕೈಬಿಡಬೇಕೆಂದು ವಿನಂತಿಸಿರುತ್ತಾರೆ.

ಇಲಾಖಾ ವಿಚಾರಣೆ ಪ್ರಕ್ರಿಯೆ ಮತ್ತು ಕ್ರಿಮಿನಲ್ ಮೊಕದ್ದಮೆಯ ನಡವಳಿಗಳು ಪ್ರತ್ಯೇಕ ಪ್ರಕ್ರಿಯೆಗಳಾಗಿರುತ್ತವೆ. ಕೇವಲ ಕ್ರಿಮಿನಲ್ ಮೊಕದ್ದಮೆಯಲ್ಲಿ ಆರೋಪ ಸಾಬೀತಾಗಿಲ್ಲವೆಂಬ ಕಾರಣವನ್ನು ಆಧಾರವಾಗಿಟ್ಟುಕೊಂಡು ಇಲಾಖಾ ವಿಚಾರಣೆ ಪ್ರಕ್ರಿಯೆಯಿಂದ ಸಂಬಂಧಿಸಿದವರನ್ನು ಕೈಬಿಡಲು ಸಾಧ್ಯವಿರುವುದಿಲ್ಲ. ಇಲಾಖಾ ವಿಚಾರಣೆ ಪ್ರಕ್ರಿಯೆಯಲ್ಲಿ " Preponderance of probbility of guilt is sufficient to hold that the charge is proved in a departmental enquiry" ಎಂಬ ತತ್ವವನ್ನು ಹಾಗೂ ಕ್ರಿಮಿನಲ್ ಮೊಕದ್ದಮೆಯಲ್ಲಿ " charges should be proved beyond all reasonable doubts" ಎಂಬ ಮಾನದಂಡವನ್ನು ಆಧರಿಸಿ ಕ್ರಮವಹಿಸಲಾಗುತ್ತಿದೆ. ಖಜಾನೆ ಇಲಾಖೆಯ ಅಧಿಕಾರಿಗಳ ಕರ್ತವ್ಯ ಲೋಪಕ್ಕೆ ಸಂಬಂಧಿಸಿದಂತೆ ಪರಿಶೀಲಿಸಲಾಗಿ ಜಿಲ್ಲಾ ಪಂಚಾಯತಿ ಕಚೇರಿಯ ಮೂಲಕ ಬಿಲ್ಲುಗಳು ಸ್ವೀಕೃತವಾಗದೇ ಇರುವುದು, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮೇಲು ರುಜು ಸಹಿ ಮಾಡುವ ಸ್ಥಳದಲ್ಲಿ ಕಾರ್ಯಪಾಲಕ ಇಂಜಿನಿಯರ್ ರವರ ನಕಲು ಸಹಿ ಮಾಡಿ ಸೀಲು ಹಾಕಿರುವುದನ್ನು ಪರಿಶೀಲಿಸದೇ ಬೃಹತ್ ಪ್ರಮಾಣದ ಅಂದರೆ 1.00 ಕೋಟಿ ರೂ.ಗಳಿಗೂ ಹೆಚ್ಚಿನ ಮೊತ್ತದ ಬಿಲ್ಲುಗಳನ್ನು ಪಾಸು ಮಾಡಲು ಕ್ರಮವಹಿಸಿರುವುದು ಸದರಿ ಅಧಿಕಾರಿ / ನೌಕರರುಗಳು ಓ.ಲಕ್ಷ್ಮಣ ಹಿಂದಿನ ವ್ಯವಸ್ಥಾಪಕರವರ ಜೊತೆ ಶಾಮೀಲಾಗಿ ಬಿಲ್ಲುಗಳನ್ನು ಪಾಸು ಮಾಡಿರುವುದು ಸ್ಪಷ್ಟವಾಗಿರುತ್ತದೆ. ಹಾಗಾಗಿ ಖಜಾನೆ ಇಲಾಖೆಯ ಅಧಿಕಾರಿಗಳು ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯದಲ್ಲಿ ಪೂರ್ಣ ಪ್ರಮಾಣದ ಕರ್ತವ್ಯ ನಿಷ್ಠೆ ಪ್ರದರ್ಶಿಸದೇ ತಮ್ಮ ಜವಾಬ್ದಾರಿಯನ್ನು ನಿಭಾಯಿಸದೇ ವಿಫಲರಾಗಿ ಬೃಹತ್ ಪ್ರಮಾಣದ ಆರ್ಥಿಕ ನಷ್ಟಕ್ಕೆ ಕಾರಣರಾಗಿರುವುದು ಸ್ಪಷ್ಟವಾಗಿರುತ್ತದೆ. ಅಲ್ಲದೇ ಪ್ರವಾಸ ಭತ್ಯೆ ಬಿಲ್ಲುಗಳಿಗೆ ನಿಗಧಿಪಡಿಸದ ಅನುದಾನಕ್ಕಿಂತ ಹೆಚ್ಚಿನ ಮೊತ್ತದ ಬಿಲ್ಲುಗಳು ಸ್ವೀಕೃತವಾಗಿದ್ದರೂ ಸಹ ಅದನ್ನು ಖಜಾನೆ ಇಲಾಖೆಯು ಪರಿಗಣಿಸದೇ ಅವುಗಳನ್ನು ಪಾಸ್ ಮಾಡಿರುವುದನ್ನು ಗಮನಿಸಿದಲ್ಲಿ ಖಜಾನಾ ಇಲಾಖೆಯ ಅಧಿಕಾರಿಗಳು ಸಹ ಸಂಪೂರ್ಣವಾಗಿ ಭಾಗಿಯಾಗಿದ್ದಾರೆಂದು ಸ್ಪಷ್ಟವಾಗಿರುತ್ತದೆ. ಒಂದು ವೇಳೆ ಖಜಾನೆ ಇಲಾಖೆಯ ಅಧಿಕಾರಿಗಳು ಈ ಲೋಪವನ್ನು ಗಮನಿಸಿದ್ದಲ್ಲಿ ಇಡೀ ಪ್ರಕರಣವನ್ನು ತಡೆಯಲು ಅವಕಾಶವಿತ್ತು. ಆದರೆ, ಖಜಾನೆ ಇಲಾಖೆಯ ಅಧಿಕಾರಿಗಳು ದಿವಂಗತ ಓ.ಲಕ್ಷ್ಮಣ ಇವರ ಜೊತೆ ಶಾಮೀಲಾಗಿ ಬಿಲ್ಲುಗಳನ್ನು ಪಾಸು ಮಾಡಿರುವುದರಿಂದ ಸರ್ಕಾರಕ್ಕೆ ಬೃಹತ್ ಪ್ರಮಾಣದ ಆರ್ಥಿಕ ನಷ್ಟ ಉಂಟಾಗಿರುವುದು ಸ್ಪಷ್ಟವಾಗಿರುತ್ತದೆ.

ಈ ಪ್ರಕರಣದಲ್ಲಿ ವಿಚಾರಣಾಧಿಕಾರಿ ರವರು ಆರೋಪಿತ ಅಧಿಕಾರಿಗಳ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಲಭ್ಯವಾದ ಎಲ್ಲಾ ಸಾಕ್ಷಿ ದಾಖಲೆಗಳನ್ನು ಪರಿಗಣಿಸಿ ಆರೋಪಿಗಳ ಕುರಿತು ನಿರ್ಣಯಿಸಿರುವುದು ಸಮರ್ಪಕವಾಗಿದ್ದು ವಿಚಾರಣಾಧಿಕಾರಿರವರ ವರದಿಯನ್ನು ಅಲ್ಲಗಳೆಯುವಂತಹ ಯಾವುದೇ ಅಂಶಗಳು ಕಂಡುಬರುವುದಿಲ್ಲ. ಅದ್ದರಿಂದ ವಿಚಾರಣಾಧಿಕಾರಿ ರವರ ನಿರ್ಣಯವು ಸಮರ್ಪಕವಾಗಿದೆ.

ದಿವಂಗತ ಓ.ಲಕ್ಷ್ಮಣ ಇವರು ಸಲ್ಲಿಸಿದ ತಪ್ಪೊಪ್ಪಿಗೆ ಪತ್ರದಲ್ಲಿನ ಅಂಶಗಳಲ್ಲಿ ಪ್ರವಾಸ ಭತ್ಯೆ ಬಿಲ್ಲುಗಳಿಗೆ ಕಾರ್ಯಪಾಲಕ ಇಂಜಿನಿಯರ್ ರವರ ಸಹಿಯನ್ನು ಫೋರ್ಜರಿ ಮಾಡಿರುವುದು; ಖಜಾನೆಗೆ ಸಲ್ಲಿಸುವ ಸಂದರ್ಭದಲ್ಲಿಯೂ ಸಹ ಕಾರ್ಯಪಾಲಕ ಇಂಜಿನಿಯರ್ ರವರ ಸೀಲ್ ಹಾಕಿ ಸಹಿಯನ್ನು ಫೋರ್ಜರಿ ಮಾಡಿರುವುದು; ಖಜಾನೆಯಿಂದ ಚೆಕ್‌ಗಳನ್ನು ಪಡೆದ ನಂತರವೂ ಸಹ ಕಾರ್ಯಪಾಲಕ ಇಂಜಿನಿಯರ್ ರವರ ಸಹಿಯನ್ನು ಫೋರ್ಜರಿ ಮಾಡಿರುವುದು ಹಾಗೂ ಅಂತಿಮವಾಗಿ ಬ್ಯಾಂಕ್‌ನಿಂದ ಹಣ ಪಡೆದ ನಂತರ ಅದನ್ನು ಸಂಬಂಧಿಸಿದ ಸಿಬ್ಬಂದಿಗಳಿಗೆ ಬಟವಾಡೆ ಮಾಡಿದಂತೆ ವಿವಿಧ ಸಿಬ್ಬಂದಿಗಳ ಸಹಿಗಳನ್ನೂ ಸಹ ಫೋರ್ಜರಿ ಮಾಡಿರುವುದಾಗಿ ಮತ್ತು ಈ ಯಾವುದೇ ವಿವರಗಳನ್ನು ನಗದು ಪುಸ್ತಕದಲ್ಲಿ ನಮೂದಿಸಿರುವುದಿಲ್ಲವೆಂದು ಸ್ಪಷ್ಟಪಡಿಸಿದ್ದು, ಒಟ್ಟಾರೆ ಸಂಪೂರ್ಣವಾಗಿ ಪ್ರಕರಣಕ್ಕೆ ದಿವಂಗತ ಓ.ಲಕ್ಷ್ಮಣ ಮತ್ತು ಖಜಾನೆ ಇಲಾಖೆಯ ಅಧಿಕಾರಿ / ನೌಕರರು ಜವಾಬ್ದಾರರಾಗಿರುವುದು ಸ್ಪಷ್ಟವಾಗಿರುತ್ತದೆ. ಈ ಕುರಿತಂತೆ ಸಿ.ಓ.ಡಿ. ಪೊಲೀಸ್ ಮಹಾ ನಿರ್ದೇಶಕರವರ ಕಛೇರಿಯಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಸದರಿ ಕಛೇರಿಯಿಂದ ತನಿಖೆ ನಡೆಸಿ ಸಲ್ಲಿಸಿದ ವರದಿಯಲ್ಲಿ ದಿವಂಗತ ಓ.ಲಕ್ಷ್ಮಣ ಇವರನ್ನು ಹೊರತುಪಡಿಸಿ ಈ ಪ್ರಕರಣದಲ್ಲಿ ಬೇರೆ ಯಾರೂ ಆರೋಪಿಗಳು ಇಲ್ಲದಿರುವುದರಿಂದ ಈ ಕುರಿತಂತೆ ಹಾವೇರಿಯ ಜಿಲ್ಲಾ ಸತ್ರ ನ್ಯಾಯಾಲಯಕ್ಕೆ ದಿನಾಂಕ: 17.07.2009 ರಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಲಾಗಿದೆ ಎಂದು ಪೊಲೀಸ್ ಮಹಾ ನಿರ್ದೇಶಕರು, ಸಿ.ಓ.ಡಿ. (ತಪಾಸಣೆ), ಇವರು ದಿನಾಂಕ: 03.03.2009 ರಂದು ಒಳಾಡಳಿತ ಇಲಾಖೆಗೆ ವರದಿಯಲ್ಲಿ ಸಲ್ಲಿಸಿರುತ್ತಾರೆ.

ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾವೇರಿ ಇವರು ದಿನಾಂಕ: 06.12.2004ರಂದು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಜನವರಿ-2004ರಿಂದ ನವೆಂಬರ್-2004ರ ಅವಧಿಯಲ್ಲಿ ಒಟ್ಟಾರೆ ರೂ.31,11,580/-ಗಳನ್ನು ಪಡೆದಿದ್ದು, ಈ ಪೈಕಿ ರೂ.25,71,760/-ಗಳನ್ನು ಸರ್ಕಾರಕ್ಕೆ ಮರಳಿಸಿರುವುದಾಗಿ ವರದಿ ಮಾಡಿದ್ದಾರೆ. ಅಲ್ಲದೆ, ಸದರಿಯವರು ಪ್ರವಾಸ ಭತ್ಯೆ ಬಿಲ್ಲುಗಳನ್ನು ಫೋರ್ಜರಿ ಮಾಡಿದ ವಿಷಯವು ಯಾವುದೇ ರೀತಿಯಲ್ಲಿ ಅನುಮಾನ ಬಾರದಂತೆ ನಡೆದುಕೊಂಡಿರುತ್ತಾರೆಂದು, ಇದನ್ನು ನಗದು ಪುಸ್ತಕದಲ್ಲಿ ನಮೂದಿಸಿರುವುದಿಲ್ಲವೆಂದು ವಿಭಾಗ ಕಛೇರಿಯ ಸಿಬ್ಬಂದಿಯಾಗಲೀ ಅಥವಾ ಕಾರ್ಯಪಾಲಕ ಇಂಜಿನಿಯರ್ ಆಗಲೀ ಯಾವುದೇ ಪ್ರವಾಸ ಕೈಗೊಂಡು ಪ್ರವಾಸ ಭತ್ಯೆ ಬಿಲ್ಲುಗಳನ್ನು ತೆಗೆದುಕೊಂಡಿರುವುದಿಲ್ಲವೆಂದು, ಈಗಾಗಲೇ ಸದರಿಯವರು ಭರ್ತಿ ಮಾಡಿದ ಮೊತ್ತವನ್ನು ಹೊರತುಪಡಿಸಿ ಉಳಿದ ಮೊತ್ತವನ್ನೂ ಸಹ ಸರ್ಕಾರಕ್ಕೆ ಮರಳಿಸುವುದಾಗಿ ಒಪ್ಪಿಕೊಂಡಿರುತ್ತಾರೆಂಬ ಮಾಹಿತಿಯನ್ನು ನೀಡಿ ಸದರಿ ಪತ್ರದ ಪ್ರತಿಯನ್ನು ಶ್ರೀ ಹೊಳೆಯಾಚಿ ಪರಸಪ್ಪ ಬಸಪ್ಪ ರವರಿಗೂ ಗುರುತಿಸಿರುತ್ತಾರೆ.

| | | | |
|---|---|---|---|
| 2 | ಶ್ರೀ ಜೆ.ರುಕ್ಮಾಂಗದನ್, ಅಂದಿನ ಪತ್ರಾಂಕಿತ ಉಪ ಖಜಾನಾಧಿಕಾರಿಗಳು, ಸವಣೂರು (ಹಾಲಿ ನಿವೃತ್ತ) | 8,01,499/- | ಸದರಿಯವರು ನಿವೃತ್ತಿ ಹೊಂದಿರುವುದರಿಂದ ಸದರಿ ಮೊತ್ತವನ್ನು ಅವರ ನಿವೃತ್ತಿ ಸೌಲಭ್ಯಗಳಿಂದ ವಸೂಲು ಮಾಡುವುದು ಹಾಗೂ ಕೊರತೆ ಬೀಳುವ ಮೊತ್ತವನ್ನು ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡುವುದರ ಜೊತೆಗೆ ನಿವೃತ್ತಿ ವೇತನದ ಶೇಕಡಾ 10ರಷ್ಟನ್ನು ಎರಡು ವರ್ಷಗಳ ಕಾಲ ಕಡಿತಗೊಳಿಸುವುದು. |
| 3 | ಶ್ರೀ ಆರ್.ಎನ್. ದೇಶಪಾಂಡೆ, ಅಂದಿನ ಮುಖ್ಯ ಲೆಕ್ಕಿಗರು, ಜಿಲ್ಲಾ ಖಜಾನೆ, ಹಾವೇರಿ. (ಹಾಲಿ ನಿವೃತ್ತ) | 2,50,469/- + 30,937/- | ಸದರಿಯವರು ನಿವೃತ್ತಿ ಹೊಂದಿರುವುದರಿಂದ ಸದರಿ ಮೊತ್ತವನ್ನು ಅವರ ನಿವೃತ್ತಿ ಸೌಲಭ್ಯಗಳಿಂದ ವಸೂಲು ಮಾಡುವುದು ಹಾಗೂ ಕೊರತೆ ಬೀಳುವ ಮೊತ್ತವನ್ನು ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡುವುದರ ಜೊತೆಗೆ ನಿವೃತ್ತಿ ವೇತನದ ಶೇಕಡಾ 10ರಷ್ಟನ್ನು ಎರಡು ವರ್ಷಗಳ ಕಾಲ ಕಡಿತಗೊಳಿಸುವುದು. |
| 4 | ಶ್ರೀ ಈಶ್ವರ ವೈ. ಮನ್ವಾಚಾರ್ಯ, ಮುಖ್ಯ ಲೆಕ್ಕಿಗರು, ಜಿಲ್ಲಾ ಖಜಾನೆ, ಹಾವೇರಿ (ಹಾಲಿ ನಿವೃತ್ತ) | 2,50,469/- + 30,937/- | ಸದರಿಯವರು ನಿವೃತ್ತಿ ಹೊಂದಿರುವುದರಿಂದ ಸದರಿ ಮೊತ್ತವನ್ನು ಅವರ ನಿವೃತ್ತಿ ಸೌಲಭ್ಯಗಳಿಂದ ವಸೂಲು ಮಾಡುವುದು ಹಾಗೂ ಕೊರತೆ ಬೀಳುವ ಮೊತ್ತವನ್ನು ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡುವುದರ ಜೊತೆಗೆ ನಿವೃತ್ತಿ ವೇತನದ ಶೇಕಡಾ 10ರಷ್ಟನ್ನು ಎರಡು ವರ್ಷಗಳ ಕಾಲ ಕಡಿತಗೊಳಿಸುವುದು. |

ದಿವಂಗತ ಓ. ಲಕ್ಷ್ಮಣ, ಹಿಂದಿನ ವ್ಯವಸ್ಥಾಪಕರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾವೇರಿ ಇವರು ಪ್ರಸ್ತುತ ನಿಧನ ಹೊಂದಿರುವುದರಿಂದ, ಇವರಿಂದ ವಸೂಲಿ ಮಾಡಬೇಕಾದ ಮೊತ್ತವನ್ನು ಸದರಿಯವರಿಗೆ ಲಭ್ಯವಾಗುವ ನಿವೃತ್ತಿ ಸೌಲಭ್ಯಗಳಿಂದ ಕಡಿತಗೊಳಿಸಿ ಬಾಕಿ ಉಳಿಯುವ ಮೊತ್ತವನ್ನು ಅವರ ಕಾನೂನು ಬದ್ಧ ವಾರಸುದಾರರ ವಿರುದ್ಧ ಸಿವಿಲ್ ದಾವೆ ಹೂಡಿ ವಸೂಲು ಮಾಡಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ ಇವರಿಗೆ ಸೂಚಿಸಿದೆ.

ಮೇಲೆ ವಿವರಿಸಿರುವ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ಹಾವೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಲ್ಲಿ ಪ್ರವಾಸ ಭತ್ಯೆ ಮತ್ತು ಸಾದಿಲ್ವಾರು ಬಿಲ್ಲುಗಳಲ್ಲಿ ಕಾರ್ಯಪಾಲಕ ಇಂಜಿನಿಯರ್‌ರವರ ಫೋರ್ಜರಿ ಸಹಿ ಮಾಡಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸರ್ಕಾರದ ಹಣ ದುರುಪಯೋಗಪಡಿಸಿಕೊಂಡ ಆರೋಪವು ಸ್ಪಷ್ಟವಾಗಿ ಸಾಬೀತಾಗಿದ್ದು, ಪ್ರಕರಣದಲ್ಲಿ ಸರ್ಕಾರಕ್ಕೆ **ಪಾವತಿಯಾಗಿರುವ 25,71,760/- ರೂ.ಗಳು, ಶ್ರೀ ಟಿ. ವೆಂಕಟೇಶ್ವರ, ಹಿಂದಿನ ಕಾರ್ಯಪಾಲಕ ಇಂಜಿನಿಯರ್ 23,18,024/- ರೂ.ಗಳು ಹಾಗೂ ದಿವಂಗತ ಎಂ.ಎಂ.ಮುಲ್ಲಾ ಹಿಂದಿನ ದ್ವಿತೀಯ ದರ್ಜೆ ಸಹಾಯಕ 2,31,212/- ರೂ.ಗಳನ್ನು ಹೊರತುಪಡಿಸಿ ವಂಚಿಸಿರುವ ಮೊತ್ತವನ್ನು** ಆಪಾದಿತರಿಂದ ವಸೂಲು ಮಾಡಲು ಸಾಬೀತಾದ ಆರೋಪದ ಗಂಭೀರತೆಗೆ ಅನುಗುಣವಾಗಿ ಆಪಾದಿತರಿಗೆ ದಂಡನೆ ವಿಧಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ ಗ್ರಾಅಪ 179 ಜಿಪಅ 2016 ಬೆಂಗಳೂರು, ದಿನಾಂಕ. 05.02.2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು 2000 – 2004ನೇ ಸಾಲಿನಲ್ಲಿ ಹಾವೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಲ್ಲಿ ಪ್ರವಾಸ ಭತ್ಯೆ ಮತ್ತು ಸಾದಿಲ್ವಾರು ಬಿಲ್ಲುಗಳಲ್ಲಿ ಅವ್ಯವಹಾರವೆಸಗಿದ ಈ ಕೆಳಕಂಡ ಅಧಿಕಾರಿ / ನೌಕರರುಗಳ ವಿರುದ್ಧ ಸಾಬೀತಾದ ಆರೋಪಗಳಿಗನುಗುಣವಾಗಿ ಅವರುಗಳ ಹೆಸರಿನ ಮುಂದೆ ಸೂಚಿಸಿರುವಂತೆ ಅವರುಗಳಿಂದ ದುರುಪಯೋಗವಾದ ಮೊತ್ತವನ್ನು ವಸೂಲಿ ಮಾಡಲು ಹಾಗೂ ನಿವೃತ್ತರಾಗಿರುವ ಅಧಿಕಾರಿ / ನೌಕರರುಗಳಿಂದ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214 ರನ್ವಯ ಅವರುಗಳ ನಿವೃತ್ತಿ ವೇತನದಲ್ಲಿ ಶೇಕಡಾ 10ರಷ್ಟನ್ನು ಎರಡು ವರ್ಷಗಳ ಕಾಲ ಕಡಿತಗೊಳಿಸುವ ದಂಡನೆಯನ್ನು ವಿಧಿಸಿ ಆದೇಶಿಸಿದೆ:-

| ಕ್ರಮ ಸಂಖ್ಯೆ | ಆರೋಪಿತರ ಹೆಸರು ಹಾಗೂ ಅವರು ಹೊಂದಿದ್ದ ಹುದ್ದೆ | ವಸೂಲು ಮಾಡಬೇಕಾದ ಮೊತ್ತ | ವಿಧಿಸಲಾದ ದಂಡನೆ |
|---|---|---|---|
| 1 | ದಿವಂಗತ ಓ ಲಕ್ಷ್ಮಣ, ವ್ಯವಸ್ಥಾಪಕರು, ಪಂ.ರಾ.ಇಂ.ವಿಭಾಗ, ಹಾವೇರಿ, | 50,09,371/- | ಇವರು ಪ್ರಸ್ತುತ ನಿಧನ ಹೊಂದಿರುವುದರಿಂದ ಈ ಮೊತ್ತವನ್ನು ಸದರಿಯವರಿಗೆ ಲಭ್ಯವಾಗುವ ನಿವೃತ್ತಿ ಸೌಲಭ್ಯಗಳನ್ನು ಕಡಿತಗೊಳಿಸಿ ಬಾಕಿ ಉಳಿಯುವ ಮೊತ್ತವನ್ನು ಅವರ ಕಾನೂನು ಬದ್ಧ ವಾರಸುದಾರರ ವಿರುದ್ಧ ಸಿವಿಲ್ ದಾವೆ ಹೂಡಿ ವಸೂಲು ಮಾಡುವುದು. |

1) ಶ್ರೀ ಜೆ. ರುಕ್ಮಾಂಗದನ್, ಅಂದಿನ ಪತ್ರಾಂಕಿತ ಉಪ ಖಜಾನಾಧಿಕಾರಿಗಳು, ಸವಣೂರು, (2) ಶ್ರೀ ಆರ್.ಎನ್.ದೇಶಪಾಂಡೆ, ಮುಖ್ಯ ಲೆಕ್ಕಿಗರು, ಜಿಲ್ಲಾ ಖಜಾನೆ, ಹಾವೇರಿ ಮತ್ತು (3) ಶ್ರೀ ಈಶ್ವರ ವೈ. ಮನ್ವಾಚಾರ್ಯ, ಅಂದಿನ ಮುಖ್ಯ ಲೆಕ್ಕಿಗರು, ಜಿಲ್ಲಾ ಖಜಾನೆ, ಹಾವೇರಿ ಇವರುಗಳು ಪ್ರಸ್ತುತ ಸೇವೆಯಿಂದ ನಿವೃತ್ತರಾಗಿರುವುದರಿಂದ ಇವರುಗಳಿಂದ ಸರ್ಕಾರಕ್ಕೆ ಉಂಟಾದ ನಷ್ಟದ ಮೊತ್ತವನ್ನು ಅವರುಗಳ ನಿವೃತ್ತಿ ಸೌಲಭ್ಯಗಳಿಂದ ಹೊಂದಾಣಿಕೆ ಮಾಡಿಕೊಳ್ಳುವಂತೆ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ಇವರಿಗೆ ತಿಳಿಸಿದೆ. ಹೊಂದಾಣಿಕೆಯ ನಂತರವೂ ಉಳಿಯುವ ಮೊತ್ತವನ್ನು ಕಂದಾಯ ಬಾಕಿಯೆಂದು ಪರಿಗಣಿಸಿ ವಸೂಲಿ ಮಾಡಲು ಹಾಗೂ ಆರೋಪಿತರಿಗೆ ವಿಧಿಸಲಾದ ದಂಡನೆಯನ್ನು ಜಾರಿಗೊಳಿಸಲು ಹಾಗೂ ಆರೋಪಿತರಿಂದ ಸರ್ಕಾರಕ್ಕೆ ಉಂಟಾದ ನಷ್ಟವನ್ನು ವಸೂಲಿ ಮಾಡಲು ಜರೂರು ಕ್ರಮ ತೆಗೆದುಕೊಳುಬೇಕೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ ಇವರಿಗೆ ಸೂಚಿಸಿದೆ.

ಈ ದಂಡನಾದೇಶ ಹೊರಡಿಸಲು ಕರ್ನಾಟಕ ಲೋಕ ಸೇವಾ ಆಯೋಗದ (ಪತ್ರ ಸಂಖ್ಯೆ: PSC 56 CNS 17 ದಿನಾಂಕ: 29.09.2018ರಲ್ಲಿ) ಸಹಮತಿ ಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ರಂಗನಗೌಡ), 05/02/2019
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್)
2. ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ/ ಆರ್ಥಿಕ ಇಲಾಖೆ.
3. ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ – ನೋಂದಾಯಿತ ಅಂಚೆ ಮುಖಾಂತರ.
5. ಖಜಾನೆ ನಿರ್ದೇಶಕರು, ಬೆಂಗಳೂರು.
6. ಖಜಾನಾಧಿಕಾರಿಗಳು, ಜಿಲ್ಲಾ ಖಜಾನೆ, ಹಾವೇರಿ.
7. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು,
8. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
9. ನಿಯಂತ್ರಕರು, ರಾಜ್ಯ ಲೆಕ್ಕ ಪತ್ರ ಇಲಾಖೆ, ಬೆಂಗಳೂರು.
10. ಶ್ರೀ ಎ. ಕೃಷ್ಣಪ್ಪ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ನಂ.1242, 8ನೇ ಕ್ರಾಸ್, ಚಂದ್ರಾಲೇಔಟ್, ಬೆಂಗಳೂರು-560040.
11. ಉಪ ಕಾರ್ಯದರ್ಶಿ (ಆಡಳಿತ), ಜಿಲ್ಲಾ ಪಂಚಾಯತ್, ಹಾವೇರಿ.
12. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾವೇರಿ.
13. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಆಡಳಿತ & ಮುಂಗಡಗಳು)

14. ಸರ್ಕಾರಿ ವಕೀಲರು, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಕಂದಾನ ಭವನ, ಕೆ.ಜಿ.ರಸ್ತೆ, ಬೆಂಗಳೂರು.
15. ಶ್ರೀಮತಿ ಸಾವಿತ್ರಿ ಇವರಿಗೆ - ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ ಇವರ ಮುಖಾಂತರ.
16. ಶ್ರೀ ಆರ್.ಎನ್.ದೇಶಪಾಂಡೆ, ನಿವೃತ್ತ ಉಪ ಖಜಾನೆ ಅಧಿಕಾರಿಗಳು, ರಾಜೇಂದ್ರನಗರ, ಗುರುಭವನ ರಸ್ತೆ, ಹಾವೇರಿ - 581110.
17. ಶ್ರೀ ಈಶ್ವರ ವೈ ಮನ್ವಾಚಾರ್ಯ, ನಿವೃತ್ತ ಪತ್ರಾಂಕಿತ ಉಪ ಖಜಾನಾಧಿಕಾರಿಗಳು, ಸಿದ್ದಾಪುರ ಇವರಿಗೆ -ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ ಇವರ ಮುಖಾಂತರ.
18. ಶ್ರೀ ಜೆ.ರುಕ್ಮಾಂಗದನ್, ನಿವೃತ್ತ ಪತ್ರಾಂಕಿತ ಉಪ ಖಜಾನಾಧಿಕಾರಿ, ನಂ.1, ಮಾರುತಿ ಭವನ, ಗುಂಡಪ್ಪ ಗಾರ್ಡನ್, 6ನೇ ಕ್ರಾಶ್, ಇ.ಜಿ.ಪುರ, ಬೆಂಗಳೂರು- 47.
19. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, (ಸೇವೆಗಳು-ಎ) / (ಸೇವೆಗಳು-ಸಿ)
20. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
21. ಗ್ರಾ.ಅ.ಪಂ.ಇಲಾಖೆಯ ಸರ್ಕಾರದ ಪ್ರದಾನ ಕಾರ್ಯದರ್ಶಿ / ಉಪ ಕಾರ್ಯದರ್ಶಿ (ಆಡಳಿತ) ಇವರುಗಳ ಅಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
22. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.
23. ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.